ಕಾರರರಾಗಿದ್ದಾರೆ. ಪತ್ರಿಕೆಗಳಲ್ಲೂ ವರದಿಯಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದ ಸಂದರ್ಭದಲ್ಲಿ, ೪ ದಿನ ದೆಹಲಿಯಲ್ಲೇ ವಾಸ್ತವ್ಯ ಹೂಡಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಜೊತೆ ಮಾತುಕತೆ ಮಾಡಿ ಕೊಂಕಣ ರೈಲ್ವೆ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರ ಯಾವ ರೀತಿ ಭಾಗವಹಿಸುತ್ತದೆ? ಆದರಲ್ಲಿ ರಾಜ್ಯಪಾಲರ ಎಷ್ಟು ಹಣವನ್ನು ಹೂಡುತ್ತದೆ ಎಂಬ ಬಗ್ಗೆ, ಒಪ್ಪಂದವಾಗಿದೆ ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಸದನ ನಡೆಯುತ್ತಿರುವ ಸಂದರ್ಭದಲ್ಲಿ ಈ ವಿಚಾರವಾಗಿ ಸದನಕ್ಕೆ ಮತ್ತು ಜನತೆಗೂ ಕೂಡ ವಿವರಗಳು ಗೊತ್ತಾಗಬೇಕಾಗುತ್ತದೆ. ಆದುದರಿಂದ ಕೊಂಕಣ ರೈಲ್ವೆ ವಿಚಾರವಾಗಿ ಮಾನ್ಯ ಮುಖ್ಯ ಮಂತ್ರಿಗಳು ವಿವರಗಳನ್ನು ಸದನಕ್ಕೆ ತಿಳಿಸಿದರೆ ಅನುಕೂಲವಾಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಈ ವಿಚಾರದ ಬಗ್ಗೆ ಸ್ಟೇಟ್‌ಮೆಂಟ್‌ನ್ನು ಸೋಮವಾರ ದಿನದಂದು ಕೊಡಲು ಬಯಸುತ್ತೇನೆ.

ಅಧ್ಯಕ್ಷರು.—ಆಯಿತು.

ಶ್ರೀ ವಾಟಾಳ್ ನಾಗರಾಜ್. - ಮಾನ್ಯ ಅಧ್ಯಕ್ಷರೆ, ಕೊಂಕಣ ರೈಲ್ವೆ ವಿಚಾರದಲ್ಲಿ ಮತ್ತು ಸಾಲ ಮನ್ನಾ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರದ ಜೊತೆಯಲ್ಲಿ ಏನು ಮಾತನಾಡಿದ್ದಾರೆ, ಯಾವ ನಿಲುವಿಗೆ ಬಂದಿದ್ದಾರೆ ಎಂದು ದಯಮಾಡಿ ತಿಳಿಸಬೇಕು. ಆ ಕುರಿತು ಕೇಂದ್ರ ಸರಕಾರದವರು ಮಾಡಿದ ವಾಗ್ದಾನ ಏನು ಮತ್ತು ಆ ದಿಶೆಯಲ್ಲಿ ಕರ್ನಾಟಕ ಸರಕಾರದವರು ತಳೆದ ನಿಲುವು ಏನು ಎಂಬುದನ್ನು ದಯವಿಟ್ಟು ತಿಳಿಸಬೇಕು. ಏಕೆಂದರೆ, ಕೊಂಕಣ ರೈಲ್ವೆ ವಿಚಾರ ದಷ್ಟೇ ಮಹತ್ವ ರೈತರ ಸಾಲ ಮನ್ನಾ ಕುರಿತು ಕೂಡ ಇದ್ದೇ ಇದೆ. ಸಾಲ ಮನ್ನಾ ವಿಚಾರದಲ್ಲಿ ಕೇಂದ್ರ ಸರಕಾರದವರೊಂದಿಗೆ ಯಾವ ರೀತಿಯ ಮಾತು ಮತ್ತು ಹೊಂದಾಣಿಕೆ ಮಾಡಿಕೊಂಡು ಬಂದಿದ್ದಾರೆ ಎಂದು ತಿಳಿಸಬೇಕು. ಈ ಬಗ್ಗೆ ಸರಕಾರದ ನೀತಿಯನ್ನು ಪ್ರಕಟಿಸಬೇಕು ಈ ಕುರಿತು ತಮ್ಮ ಪಕ್ಷದ ನಿಲುವು ಏನೆಂಬುದನ್ನು ಹೇಳಬೇಕು. ತಮ್ಮ ಪಕ್ಷದ ಅಧ್ಯಕ್ಷರು ಕೂಡ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಕೇಳಿದ್ದು ಅದು ಪತ್ರಿಕೆಗಳಲ್ಲಿ ಬಂದಿದೆ. ಆದುದರಿಂದ ಈ ಬಗ್ಗೆ ಸ್ಪಷ್ಟವಾಗಿ ರಾಜ್ಯ ಸರಕಾರದವರು ಮತ್ತು ಕೇಂದ್ರ ಸರ್ಕಾರದವರು ತಳೆದ ನಿಲುವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ರೈತರುಗಳಿಗೆ ಸಹಕಾರ ಸಂಘದಿಂದ ಗೊಬ್ಬರದ ಸರಬರಾಜು ಆಗುತ್ತಿಲ್ಲ ಎನ್ನುತಕ್ಕಂಥಾದ್ದನ್ನು ಕೇಳುವ ಸಲುವಾಗಿ ಗಮನ ಸೆಳೆಯುವ ಸೂಚನೆಯನ್ನು ಎರಡು ದಿವಸಗಳ ಹಿಂದೆಯೇ ಕಳುಹಿಸಿದ್ದೇನೆ, ಅದು ಇನ್ನೂ ಬಂದಿಲ್ಲ. ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಿ.....

ಅಧ್ಯಕ್ಷರು.—ಈಗ ಮಾನ್ಯ ಲೋಕೋಪಯೋಗಿ ಸಚಿವರು ಗುಲ್ಬರ್ಗಕ್ಕೆ ಹೋಗಿ ಅಧಿಕ ಮಳೆಯಿಂದ ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ ಆದ ಹಾನಿಯ ಅಂದಾಜು ಕುರಿತು ತಮ್ಮ ಹೇಳಿಕೆಯನ್ನು ನೀಡಲಿದ್ದಾರೆ.

ಅತಿವೃಷ್ಟಿಯಿಂದ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಆದ ಹಾನಿಯ ಬಗ್ಗೆ ಮಂತ್ರಿಗಳ ಹೇಳಿಕೆ.

† ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—ಸನ್ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ನಾನು ಈ ಹೇಳಿಕೆಯನ್ನು ಕೊಡುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳವರ ಆದೇಶದ ಮೇರೆಗೆ ನಾನು ದಿನಾಂಕ ೧೬-೬-೯೦ ರಂದು ಗುಲ್ಬರ್ಗ ಜಿಲ್ಲೆಯಲ್ಲಿ ಮತ್ತು ದಿನಾಂಕ ೧೭-೬-೯೦ ರಂದು ಬೀದರ್ ಜಿಲ್ಲೆಯಲ್ಲಿ ಅಧಿಕ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಪ್ರವಾಸ ಮಾಡಿರುತ್ತೇನೆ. ಪ್ರವಾಸ ಸಮಯದಲ್ಲಿ ಲೋಕಸಭಾ ಸದಸ್ಯರುಗಳಾದ ಶ್ರೀ ಬಿ.ಜಿ. ಜವಳಿ, ಶ್ರೀ ನರಸಿಂಗಸೂರ್ಯವಂಶಿ ಮತ್ತು ಶಾಸಕ ಮಿತ್ರರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಧರ್ಮಸಿಂಗ್, ಶ್ರೀ ಬಾಬುರಾವ್ ಚಿಂಚನಸೂರು, ಶ್ರೀ ಬಸವರಾಜ್ ಪಾಟೀಲ್ ಮತ್ತು ಡಾ. ಮಲಕಾರೆಡ್ಡಿ ಇವರುಗಳು ಹಾಜರಿದ್ದರು.

ದಿ : ೩-೫-೯೦ ರಂದು ಆಂಧ್ರ ಕರಾವಳಿ ಚಂಡಮಾರುತದ ಹಿನ್ನೆಲೆಯಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ದಿ : ೭-೫-೯೦ ರಿಂದ ಪ್ರಾರಂಭವಾದ ಅಧಿಕ ಮಳೆಯಿಂದ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳು

† ಈ ಚಿಪ್ಪೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಅನೇಕ ರಸ್ತೆಗಳು, ಕಲ್ವರ್ಟ್‌ಗಳು, ಸೇತುವೆಗಳು, ಕೆರೆಗಳು ಹಾನಿಗೊಳಗಾಗಿದ್ದು ಪ್ರಾರಂಭದ ಅಂದಾಜಿನ ಪ್ರಕಾರ ಹಾನಿಯ ಒಟ್ಟು ಮೊತ್ತ ಸುಮಾರು ೪ ರಿಂದ ೫ ಕೋಟಿಯವರೆಗೆ ಎಂದು ಹೇಳಲಾಗಿದೆ. ಇದರ ಬಗ್ಗೆ ವಿವರವಾದ ಮಾಹಿತಿ ಮತ್ತು ಅಂದಾಜು ಪಟ್ಟಿಯನ್ನು ತರಿಸಲಾಗುತ್ತಿದೆ.

ಗುಲ್ಬರ್ಗ ಜಿಲ್ಲೆಯಲ್ಲಿ ಹಾನಿಯ ವಿವರಗಳು

ಶಹಪುರ ತಾಲ್ಲೂಕು ಶೋರಾಪುರ ಉಪ ವಿಭಾಗಕ್ಕೆ ಸೇರಿದ ಹೊನ್ನಮರಪಳ್ಳಿ ರಸ್ತೆಯ ೨೨೦ನೇ ಕಿ.ಮೀ. ಬಳಿ ಎರಡು ಕೆರೆಗಳ ಅಧಿಕ ನೀರು ನುಗ್ಗಿದ್ದರಿಂದ ಡಿವೀಯೇಶನ್ ರಸ್ತೆ ಕೊಚ್ಚಿಹೋಗಿ ರಸ್ತೆ ಸಂಪರ್ಕ ಕಡಿದಿತ್ತು. ಸದ್ಯ ರಿಂಗ್‌ಬಂಡ್ ಹಾಕಿ ಸಂಪರ್ಕ ಕಲ್ಪಿಸಲಾಗಿದೆ. ಇಲ್ಲಿಗೆ ಸೇತುವೆ ನಿರ್ಮಾಣದ ಕೆಲಸವನ್ನು ಜುಲೈ ೬೦ ರ ಅಂತ್ಯದೊಳಗಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಯಾದಗೀರ್‌ನಿಂದ ೨೭ ಕಿ.ಮೀ. ದೂರದಲ್ಲಿರುವ ಕಿಲ್ಲನಕೇರಾ ಗ್ರಾಮದ ಕೆರೆ ದಿ : ೨೨-೫-೬೦ ರಂದು ಒಡೆದು ನೀರು ನುಗ್ಗಿ ಗದ್ದೆ ಮತ್ತು ಗ್ರಾಮದೊಳಕ್ಕೆ ಹರಿದು ತೊಂದರೆ ಉಂಟಾಗಿರುತ್ತದೆ. ೩ ಗುಡಿಸಲುಗಳು ಮುರಿದುಬಿದ್ದಿವೆ, ೭ ರಾಸುಗಳು ಸತ್ತಿವೆ. ಈ ಕೆರೆ ಕೆಲ್ಸದ ದುರಸ್ತಿಗಾಗಿ ಮತ್ತು ಗ್ರಾಮಕ್ಕೆ ಆಗುವ ಅಪಾಯ ತಪ್ಪಿಸಲು ಎರಡು ಸೇತುವೆಗಳ ನಿರ್ಮಾಣದ ಅಗತ್ಯವಿದ್ದು ಅದಕ್ಕೆ ಸುಮಾರು ೪ ಲಕ್ಷ ರೂ. ಗಳಾಗಬಹುದೆಂದು, ಅಂದಾಜು ತಯಾರಿಸಿ ಕೆಲಸ ತೆಗೆದುಕೊಳ್ಳಲು ಆದೇಶ ನೀಡಿರುತ್ತೇನೆ.

ಆಳಂದ ತಾಲ್ಲೂಕು ನಿಂಬರ್ಗದಿಂದ ೩ ಕಿ.ಮೀ. ದೂರದಲ್ಲಿರುವ ಹಿತ್ತಲಸಿರೂರು ಬಳಿ ಅಮರ್ಜಾ ನದಿಯ ಪ್ರವಾಹದಿಂದ ದಿ ; ೧೩-೬-೬೦ ರಂದು ೨ ಕಿ.ಮೀ. ರಸ್ತೆ ಮತ್ತು ಒಂದು ಸೇತುವೆ ಹಾನಿಗೊಳಗಾಗಿರುತ್ತದೆ. ಈ ರಸ್ತೆ ಮಹಾರಾಷ್ಟ್ರ ಗಡಿಯಲ್ಲಿದ್ದು ವಿಶೇಷ ಸಂಪರ್ಕ ರಸ್ತೆಯಾಗಿರುತ್ತದೆ. ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ತಕ್ಷಣ ಅಂದಾಜು ತಯಾರಿಸಿ ಕೆಲಸ ಪ್ರಾರಂಭಿಸಲು ಅಧಿಕಾರಿಗಳಿಗೆ ಆದೇಶ ನೀಡಿರುತ್ತೇನೆ.

ಅತಿ ಮಳೆಯಿಂದ ಜಿಲ್ಲೆಯಾದ್ಯಂತ ಅಲ್ಲಲ್ಲಿ ವಿದ್ಯುತ್ ಕಂಬಗಳು ವಾಲಿರುವುದನ್ನು ವೀಕ್ಷಿಸಿ, ಅವುಗಳ ದುರಸ್ತಿಗೆ ತಕ್ಷಣ ಕ್ರಮತೆಗೆದುಕೊಳ್ಳಲು ಸ್ಥಳೀಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಅಧಿಕಾರಿಗಳಿಗೆ ಸೂಚಿಸಿರುತ್ತೇನೆ.

ಗುಲ್ಬರ್ಗ ಜಿಲ್ಲೆಯ ಅಧಿಕಾರಿಗಳೊಡನೆ ದಿ ; ೧೬-೬-೬೦ ರಂದು ಚರ್ಚಿಸಿ, ಮಳೆ ಹಾನಿ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಿರುತ್ತೇನೆ.

ಗುಲ್ಬರ್ಗ ಜಿಲ್ಲೆಯ ೧೦ ತಾಲ್ಲೂಕುಗಳಲ್ಲಿ ಅಧಿಕ ಮಳೆಯಿಂದ ಹಾನಿಗೊಳಗಾದ ಗುಲ್ಬರ್ಗ ಜಿಲ್ಲಾ ಪರಿಷತ್ತಿಗೆ ಸೇರಿದ ೨೨ ಕಟ್ಟಡಗಳು, ಗ್ರಾಮೀಣ ರಸ್ತೆಯ ಕೆಲವು ಭಾಗಗಳು ೩೦೪ ಕಲ್ವರ್ಟ್‌ಗಳು, ೧೨೭ ಸಣ್ಣ ನೀರಾವರಿ ಕೆರೆಗಳು ಮತ್ತು ನೀರಾವರಿ ಕಾಲುವೆಗಳ ದುರಸ್ತಿಗಾಗಿ ೨ ರಿಂದ ೩ ಕೋಟಿ ರೂಗಳಿಂದ ಅಂದಾಜು ಮಾಡಲಾಗಿದೆ. ಹಾಗೂ ಗುಲ್ಬರ್ಗ ವಿಭಾಗದ ಲೋಕೋಪಯೋಗಿ ಇಲಾಖೆಗೆ ಸೇರಿದ ರಾಷ್ಟ್ರೀಯ ಹೆದ್ದಾರಿ ಪೈಕಿ ಕೆಲವು ಭಾಗ ಜಿಲ್ಲಾ ಹೆದ್ದಾರಿಗಳ ಪೈಕಿ ಕೆಲವು ಭಾಗ ಮತ್ತು ೪ ಸೇತುವೆಗಳು ಮಳೆಯು ಹಾನಿಯಾಗಿದ್ದು, ಇವುಗಳ ದುರಸ್ತಿಗೆ ಸುಮಾರು ೫೦ ರಿಂದ ೬೦ ಲಕ್ಷವಾಗಬಹುದೆಂದು ತಿಳಿದುಬಂದಿದೆ.

ಬೀದರ್ ಜಿಲ್ಲೆಯಲ್ಲಿನ ಹಾನಿಯ ವಿವರಗಳು

ಬೀದರ್ ಜಿಲ್ಲೆಯ ಅಧಿಕಾರಿಗಳೊಡನೆ ದಿ : ೧೭-೬-೬೦ ರಂದು ಸುಧೀರ್ಘವಾಗಿ ಚರ್ಚಿಸಿ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯ ಪರಿಶೀಲನೆ ನಡೆಸಿರುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಅಧಿಕ್ಯ ಮಳೆಯಿಂದ ಜಿಲ್ಲಾಪರಿಷತ್ತಿಗೆ ಸೇರಿದ ೫ ಕಟ್ಟಡಗಳು, ಕೆಲವು ರಸ್ತೆಗಳು, ೨೦ ಕಲ್ವರ್ಟ್‌ಗಳು, ೫ ಕೆರೆಗಳು ಹಾಗೂ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿಯ ಕೆಲವು ಭಾಗಗಳು ೧೪ ಸಿಡಿ ವರ್ಕ್ಸ್ ಹಾಗೂ ಜಿಲ್ಲಾ ಹೆದ್ದಾರಿಯ ಕೆಲವು ಭಾಗಗಳು, ೩೧ ಸಿಡಿ ವರ್ಕ್ಸ್ ಮತ್ತು ಕಟ್ಟಡಗಳು ಸೇರಿದಂತೆ ಒಟ್ಟು ಹಾನಿ ಸುಮಾರು ೧ ಕೋಟಿಯವರೆಗೆ ಬರಬಹುದೆಂದು ಅಂದಾಜು ಮಾಡಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಪ್ರಾಣಪಾಯಗೊಳಗಾದ ಕುಟುಂಬಗಳನ್ನು ಪ್ರತ್ಯಕ್ಷವಾಗಿ ಭೇಟಿ ಮಾಡಿ ಪರಿಹಾರವನ್ನು ಘೋಷಿಸಲಾಗಿದೆ. ದಿ ; ೧೫-೬-೯೦ ರಂದು ಬಿದ್ದ ಅಧಿಕ ಮಳೆಯಿಂದ ಹುಮನಾಬಾದ್ ತಾಲ್ಲೂಕು ಹಳ್ಳಿಖೇಡ (ಬಿ. ಗ್ರಾಮದ ನಿವಾಸಿ ಶ್ರೀ ಮುನಿರುದ್ದೀನ್, ತಂದೆ : ಘಕ್ರುದ್ದೀನ್, ಈತನ ಕುಟುಂಬದ ೬ ಮಂದಿ ಮರಣಹೊಂದಿದ್ದು, ಬೀದರ್ ಜಿಲ್ಲಾಧಿಕಾರಿಯವರು ೬೦೦ ರೂ.ಗಳ ಪರಿಹಾರವನ್ನು ನೀಡಿರುತ್ತಾರೆ. ೧೨೦೦-೦೦ ರೂ.ಗಳ ಮನೆ ಸಾಮಾನು ನೀಡಲಾಗಿದೆ. ಜಿಲ್ಲಾಪರಿಷತ್ತಿನವರು ಸಹ ೫೦೦-೦೦ ರೂ.ಗಳನ್ನು ನೀಡಿರುತ್ತಾರೆ. ವೈಯಕ್ತಿಕ ವಿಮಾ ಭದ್ರತಾ ಯೋಜನೆಯಡಿಯಲ್ಲಿ ೩೦೦೦-೦೦ ರೂ.ಗಳನ್ನು ಮಂಜೂರು ಮಾಡಲು ಕ್ರಮವಹಿಸಲಾಗಿದೆ. ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ೧೫,೦೦೦-೦೦ ರೂ.ಗಳನ್ನು ಘೋಷಿಸಲಾಗಿದೆ ಇದನ್ನು ಆದಷ್ಟು ಬೇಗ ಬಿಡುಗಡೆ ಮಾಡಲಾಗುವುದು.

ಔರಾದ್ ತಾಲ್ಲೂಕು ವಡಗಾಂವ ಗ್ರಾಮದಲ್ಲಿ ದಿ ; ೧೧-೬-೯೦ ರಂದು ಸಿಡಿಲು ಬಡಿದು ಮರಣ ಹೊಂದಿದ ಶ್ರೀಮತಿ ಬಸಮ್ಮ, ಇವರ ಪತಿ ; ಶಂಕರಪ್ಪನವರಿಗೆ ಸ್ಥಳದಲ್ಲೇ ಜಿಲ್ಲಾಧಿಕಾರಿಯವರ ಪರಿಹಾರ ನಿಧಿಯಿಂದ ೨೦೦೦-೦೦ ರೂ.ಗಳನ್ನು ನೀಡಲಾಯಿತು. ಮುಖ್ಯಮಂತ್ರಿಗಳ ಪರಿಹಾರನಿಧಿಯಿಂದ ಶಂಕರಪ್ಪನಿಗೆ ೫೦೦೦-೦೦ ರೂ.ಗಳು ಮತ್ತು ಸಿಡಿಲು ಬಡಿತದಿಂದ ಗಾಯಾಳುಗಳಾದ ಶ್ರೀಮತಿ ಕಲಾವತಿ ಶ್ರೀಮತಿ ಕಮಲಾಬಾಯಿ ಮತ್ತು ಶ್ರೀ ಸಿದ್ದಪ್ಪ ಇವರುಗಳಿಗೆ ತಲಾ ಒಂದು ಸಾವಿರ ರೂ.ಗಳನ್ನು ಔಷಧೋಪಚಾರದ ಸಲುವಾಗಿ ಮಂಜೂರು ಮಾಡುವುದಾಗಿ ಘೋಷಿಸಲಾಯಿತು. ಇದನ್ನು ಬಿಡುಗಡೆ ಮಾಡಲು ತಿಳಿಸಲಾಗಿದೆ.

ಪ್ರಕೃತಿಯ ವಿಕೋಪದಿಂದ ಹಾನಿಗೊಳಗಾದ ಸ್ವತ್ತುಗಳ ದುರಸ್ತಿಗಾಗಿ ಕ್ರಮ ಕೈಗೊಂಡಿದ್ದು, ದುರಸ್ತಿಕಾರ್ಯ ಈಗಾಗಲೆ ಪ್ರಗತಿಯಲ್ಲಿದೆ. ಜಿಲ್ಲೆಯ ಅಧಿಕಾರಿಗಳಿಗೆ ದುರಸ್ತಿ ಕಾರ್ಯವನ್ನು ಚುರುಕಿನಿಂದ ನಡೆಸಲು ಆದೇಶ ನೀಡಲಾಗಿದೆ. ಇದರ ಬಗ್ಗೆ ಸವಿವರವಾದ ಎಸ್ಟಿಮೇಟ್‌ಗಳನ್ನು ತಯಾರು ಮಾಡಿ ಕಳುಹಿಸಲು ಆದೇಶ ನೀಡಲಾಗಿದೆ.

ಇದರ ಬಗ್ಗೆ ಪರಿಹಾರ ನೀಡಲು ಮಾನ್ಯ ಕಂದಾಯ ಸಚಿವರಿಗೂ ಸಹ ತಿಳಿಸಲಾಗಿದೆ'

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಸಚಿವರು ಆಲ್ಲಿಗೆ ಬಂದು ಅನೇಕ ಕೆರೆಗಳನ್ನು ಖುದ್ದು ನೋಡಿದ್ದಾರೆ. ಟಾಂಕ್ಸ್ ಬ್ರೀಚಾಗಿವೆ. ಆದರೆ ಒಂದೆರಡು ಟ್ಯಾಂಕ್ಸ್‌ನ್ನು ಮಾತ್ರ ಅವರು ಮೆನ್‌ಷನ್ ಮಾಡಿದ್ದಾರೆ. ನಿಜವಾಗಿಯೂ ನನ್ನ ಒಂದೇ ತಾಲ್ಲೂಕಿನಲ್ಲಿ ಸುಮಾರು ೧೯ ಟ್ಯಾಂಕ್ಸ್ ಬ್ರೀಚ್ ಆಗಿರುವುದು ತಮ್ಮ ಗಮನಕ್ಕೆ ಬಂದಿದೆ. ರಸ್ತೆಯಂತೂ ಯಾವ ಪರಿಸ್ಥಿತಿಗೆ ಬಂದಿದೆ. ಎಂದರೆ, ನನ್ನ ಕಾನ್‌ಸ್ಟಿಟ್ಯೂಯನ್ಸಿಯಿಂದ ಗುಲ್ಬರ್ಗಕ್ಕೆ ಬರುವ ೧೨೦ ಕಿ. ಮೀ ಉದ್ದದ ರಸ್ತೆ ಎಷ್ಟು ಹಾಳಾಗಿದೆ ಎಂಬುದು ಸಚಿವರ ಗಮನಕ್ಕೆ ಬಂದಿದೆ. ಆದರೆ ಕೇವಲ ೪ ಲಕ್ಷ ರೂಪಾಯಿಗಳನ್ನು ಕೆರೆ ರಿಪೇರಿಗಾಗಿ ಮತ್ತು ರಸ್ತೆ ರಿಪೇರಿಗೆಂದು ಬಿಡುಗಡೆ ಮಾಡಿದ್ದಾರೆ. ಆದರೆ ಈ ಬಗ್ಗೆ ನಾನು ತಾಲ್ಲೂಕು ಎಇಇ ಮತ್ತು ತಹಶೀಲ್ದಾರರನ್ನು ಕಾಂಟ್ಯಾಕ್ಟ್ ಮಾಡಿದ್ದೆ ಅವರು ಹಣ ಇನ್ನೂ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತಾವು ಖುದ್ದಾಗಿ ಪರಿಸ್ಥಿತಿ ನೋಡಿದ್ದೀರಿ, ಹೆಚ್ಚಿನ ಹಣವನ್ನು ಒದಗಿಸಿಕೊಡುವುದು ಮತ್ತು ಅವರಿಗೆ ಪರಿಹಾರ ಸಿಗುವಂತೆ ಮಾಡುವುದು ಅವಶ್ಯವಿದೆ ಎಂದು ಹೇಳುತ್ತೇನೆ. ಏಕೆಂದರೆ. ಈಗ ಖಾರೀಫ್ ಸೀಸನ್‌ನಲ್ಲಂತೂ ಬಿತ್ತುವುದಕ್ಕಾಗುವುದಿಲ್ಲ. ನಮ್ಮಲ್ಲಿ ಎಳ್ಳು ಸಜ್ಜೆ, ನವಣೆ ಇಂಥಾದ್ದನ್ನು ಬಿತ್ತುಕೊಂಡು ಮಾಡುತ್ತಿದ್ದರು. ಈಗ ಬಿತ್ತುವುದಕ್ಕೆ ಸಾಧ್ಯ ಆಗುವುದಿಲ್ಲ. ಏಕೆಂದರೆ. ಆಂಧ್ರ ಕೋಸ್ಟಲ್ ಸೈಕ್ಲೋನ್ ಎಫೆಕ್ಟ್‌ನಿಂದ ನಮ್ಮ ಕಡೆ ಬಹಳ ತೊಂದರೆಯಾಗಿ ಹೆಚ್ಚಿನ ಮಳೆಯಾಗುತ್ತಿದೆ. ಈ ಅತಿವೃಷ್ಟಿಯಿಂದ ಇವತ್ತು ತೊಂದರೆಯಾಗಿದೆ. ದಯವಿಟ್ಟು ಹೆಚ್ಚಿನ ಹಣವನ್ನು ತಾವು ಕೊಟ್ಟು ಆ ಕೆಲಸವೆಲ್ಲ ಆಗಿದೆಯೋ ಇಲ್ಲವೊ ಎಂದು ಪುನರ್ ಪರಿಶೀಲಿಸಲು ಹೋಗತಕ್ಕಂಥಾದ್ದು ಅವಶ್ಯವಿದೆ. ತಾವು ಇನ್ನು ೧೫ ದಿನಗಳಲ್ಲಿ ಬಂದು ಈ ಕೆಲಸಗಳು ನಡೆದಿವೆಯೋ ಇಲ್ಲವೊ, ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ. ಎಷ್ಟು ಹಣ ಖರ್ಚಾಗಿದೆ, ತಕ್ಷಣ ಎಷ್ಟು ಪರಿಹಾರ ಕೊಟ್ಟಿದ್ದಾರೆ ಎನ್ನುವುದನ್ನು ನೋಡತಕ್ಕಂಥಾದ್ದು ಅವಶ್ಯಕತೆ ಇದೆ ಇದಕ್ಕೆ ತಾವು ಉತ್ತರ ಕೊಡಬೇಕೆಂದು ಕೇಳುತ್ತೇನೆ.

† ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಆ ದಿವಸ ತಕ್ಷಣವೇ ಆಲ್ಲಿಗೆ ಲೋಕೋಪಯೋಗಿ ಮಂತ್ರಿಗಳು ಹೋಗಬೇಕು ಅವರು ಅಲ್ಲಿ ಇದ್ದಂಥ ಪರಿಸ್ಥಿಯನ್ನು ನೋಡಿಕೊಂಡು ಬರಬೇಕೆಂದು ಹೇಳಿದಾಗ ನಾವು ಕೂಡ ಅವರ ಜೊತೆಯಲ್ಲಿ ಹೋಗಿದ್ದೆವು. ನಾವು ಎಲ್ಲಾ ಸದಸ್ಯರೂ ಕೂಡ ಹೋಗಿ ಅವರ ಜೊತೆಯಲ್ಲಿ ನೋಡಿದ್ದೇವೆ. ಪ್ರಪ್ರಥಮವಾಗಿ ಜೀವರಗಿ ತಾಲ್ಲೂಕಿಗೆ ಹೋಗಿದ್ದೇವೆ. ಅಲ್ಲಿ ಭೀಮಾ ಬ್ರಿಜ್ಜ, ಇತರೆ ಕಟ್ಟಡಗಳು ಕೂಡ ಬಹಳ ಅನಾಹುತಕ್ಕೆ ಈಡಾಗಿವೆ ಎಂದು ಖುದ್ದಾಗಿ

ನೋಡಿದ್ದೀರಿ. ಎಲ್ಲಾ ಸದಸ್ಯರು ಹೇಳಬಹುದು, ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವಾಗಲೂ ಮಳೆ ಬರುವುದಿಲ್ಲ, ಮಳೆ ಬಂದರೆ ಸಂತೋಷಪಡಬೇಕು. ಈ ತರಹ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಕೇಳಬಹುದು, ಆದರೆ ಇತ್ತೀಚೆಗೆ ಅಲ್ಲಿ ಪ್ರಪ್ರಥಮವಾಗಿ ಅಷ್ಟೊಂದು ಮಳೆ ಯಾಗಿದೆ, ಈಗಾಗಲೇ ಶ್ರೀಮಾನ್ ಖರ್ಗೆಯವರು ಹೇಳಿದ ಹಾಗೆ, ಅಲ್ಲಿ ಬಿತ್ತನೆ ಕೂಡ ಪ್ರಾರಂಭ ವಾಗಿಲ್ಲ. ಅದನ್ನು ತಾವು ಕೂಡ ನೋಡಿದ್ದೀರಿ. ಇವತ್ತು ಅಲ್ಲಿ ದುಡ್ಡನ್ನು ಬಿಡುಗಡೆ ಮಾಡಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎನ್ನತಕ್ಕಂಥ ಭಾವನೆ ಸರ್ಕಾರದ ಮನಸ್ಸಿನಲ್ಲಿ ಇದೆ. ಇವತ್ತು ಅದನ್ನು ಈಡೇರಿಸಬೆ ಕಾದರೆ ಅಲ್ಲಿ ಏನೇನೂ ಪಿಡಬ್ಲ್ಯೂಡಿ. ಸಿಬ್ಬಂದಿ ಇದೆ, ಅವರಲ್ಲಿ ಬಹಳಷ್ಟು ಜನ ಎಲ್ಲಾ ಕಡೆಗೆ ವರ್ಗಾವಣೆಯಾಗಿದ್ದಾರೆ. ದುಡ್ಡು ಬಿಡುಗಡೆ ಮಾಡಿದರೆ ಅಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ಕೂಡಾ ಇಲ್ಲ. ಅಲ್ಲಿ ಕೆಲಸ ಮಾಡಬೇಕಾದರೆ ನೀರಾವರಿ ಇಲಾಖೆಯಾಗಲಿ, ಬೇರೆ ಇಲಾಖೆಯಾಗಲಿ ಎಲ್ಲಾ ಕಡೆಗೂ ಸಿಬ್ಬಂದಿಯನ್ನು ತಾವು ಒದಗಿಸಿಕೊಡಬೇಕು. ಅಲ್ಲಿ ಬಹಳ ಸರಿಯಾಗಿ ಕೆಲಸ ಆಗಬೇಕು, ಜನರ ಮನಸ್ಸಿಗೆ ಹಿಡಿಸುವ ಹಾಗೆ ಕೆಲಸ ಆಗಬೇಕಾದರೆ, ತಾವು ಕೂಡ ಅಧಿಕಾರಿಯನ್ನು ನೇಮಕ ಮಾಡಿ, ಅಲ್ಲಿ ಯಾರು ಅನಾಹುತಕ್ಕೆ ಈಡಾಗಿದ್ದಾರೆ, ಆ ಜನರ ರಕ್ಷಣೆಗೆ ಬರುವ ಹಾಗೆ ಕೆಲಸಕಾರ್ಯಗಳು ಆಗಬೇಕು. ಇದರ ಬಗ್ಗೆ ತಾವೇ ಖುದ್ದಾಗಿ ಇನ್ನೊಮ್ಮೆ ೧೫ ದಿವಸದಲ್ಲಿ ಭೇಟಿ ಕೊಟ್ಟು ಸರಿಯಾಗಿ ಕೆಲಸ ಆಗಿದೆಯೋ ಇಲ್ಲವೊ ಎನ್ನುವುದನ್ನು ತಾವು ಸಮೀಕ್ಷೆ ಮಾಡಬೇಕು ಎಂದು ತಮ್ಮ ಮುಖಾಂತರ ನಾನು ಸಂಬಂಧಪಟ್ಟ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ ಅಧಿಕ ಮಳೆ ಬಂದಿರುವುದರಿಂದ ಇಷ್ಟು ತರಾತುರಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟ ಸಚಿವರನ್ನು ಅಲ್ಲಿಗೆ ಕಳುಹಿಸಿದ್ದಾರೆ. ಆ ರೀತಿಯ ಒಂದು ವ್ಯವಸ್ಥೆಯನ್ನು ತಾವು ಮಾಡಿದ್ದೀರಿ. ಒಂದು ಪ್ರಶ್ನೆ ಏನೆಂದರೆ ಅಲ್ಲಿ ತಾವು ಪರಿಹಾರವನ್ನು ಏನು ಘೋಷಣೆ ಮಾಡಿದ್ದೀರಿ ಅಲ್ಲಿ ಇನ್ನೂ ಜಾಸ್ತಿ ಪರಿಹಾರ ವನ್ನು ಕೊಡಬೇಕಾದ್ದು ಅತಿ ಮುಖ್ಯವಾಗಿದೆ. ಜೊತಗೆ ಅದಕ್ಕೆ ಸಂಬಂಧಪಟ್ಟವರು ಯಾರಿದ್ದಾರೆ, ಅವರಿಗೆ ಕೂಡಲೇ ಕೆಲಸವನ್ನು ಒದಗಿಸಿ. ಯಾರು ಹಾನಿಗೆ ಒಳಗಾಗಿದ್ದಾರೆ, ಯಾರಿಗೆ ಪ್ರಾಣ ಹಾನಿ ಯಾಗಿದೆ, ಅವರಿಗೆ ಸಂಬಂಧಪಟ್ಟವರು ಯಾರಿದ್ದಾರೆ, ಅವರಿಗೆ ಕೂಡಲೇ ಕೆಲಸವನ್ನು ಒದಗಿಸ ತಕ್ಕಂಥದ್ದರ ಜೊತೆಗೆ ಈಗಾಗಲೇ ಶ್ರೀಮಾನ್ ಖರ್ಗೆಯವರು ಹೇಳಿದ ಹಾಗೆ ಲೋಕೋಪಯೋಗಿ ಸಚಿವರೇ ವೈಯಕ್ತಿಕವಾಗಿ ಅಲ್ಲಿಗೆ ಹೋಗಿ ಏನೇನು ಕೆಲಸಕಾರ್ಯಗಳು ನಡೆಯುತ್ತಿವೆ ಎನ್ನತಕ್ಕಂಥದ್ದಾರ ಬಗ್ಗೆ ವಿಶೇಷವಾದಂಥ ಗಮನವನ್ನು ಕೊಟ್ಟು ಒಂದು ಯುದ್ಧದ ರೀತಿಯಲ್ಲಿ ಅಲ್ಲಿ ಕೆಲಸ ನಡೆಯ ಬೇಕಾಗಿದೆ. ಆದಕ್ಕೆ ತಾವು ಆದ್ಯ ಗಮನವನ್ನು ಕೊಡಬೇಕು. ಎಷ್ಟೋ ಸಾರಿ ಇಂತಹ ಸಮಯ ಬಂದಾಗ ಈ ರೀತಿಯಲ್ಲಿ ಉತ್ತರ ಕೊಟ್ಟು ಕೂಡಾ ಕೆಲಸ ಆಗದೇ ಇರತಕ್ಕಂಥ ಅನೇಕ ಸಂದರ್ಭಗಳು ಇವೆ. ಆದ್ದರಿಂದ ಇದನ್ನು ಆ ರೀತಿ ಆಗುವುದಕ್ಕೆ ಬಿಡದೆ ತಾವು ಕೂಡಲೇ ವ್ಯವಸ್ಥಿತವಾಗಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಬಾದರಲಿ ಹಂಪನಗೌಡ.—ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಕೂಡಾ ಅತಿ ವೃಷ್ಟಿಯಿಂದ ಹಾನಿಗೆ ಒಳಗಾಗಿದ್ದಾರೆ. ಗುಲ್ಬರ್ಗ ಜಿಲ್ಲೆಗೆ ಮಾನ್ಯ ಲೋಕೋಪಯೋಗಿ ಸಚಿವರು ಹೋಗಿ ಬಂದಿದ್ದಾರೆ. ಆದರೆ ನಮ್ಮ ರಾಯಚೂರು ಜಿಲ್ಲೆಗೆ ಏತಕ್ಕೆ ಬಂದಿಲ್ಲವೋ ನನಗೆ ಅರ್ಥವಾಗಿಲ್ಲ. ಸಿಂಧನೂರಿನಲ್ಲಿ ಸುಮಾರು ೨೫ ಲಕ್ಷ ರೂಪಾಯಿಯಷ್ಟು ನಷ್ಟವಾಗಿದೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳೆದ ತಿಂಗಳು ೨೫ನೇ ತಾರೀಖಿನ ದಿವಸ ಮನವಿಯನ್ನು ಕೂಡಾ ಕೊಟ್ಟಿದ್ದೇನೆ ಮತ್ತು ಗಪ್ಪನ ಪೇಟೆಯಲ್ಲಿ ಸಾಕಷ್ಟು ತುರ್ತು ಸಚಿವರು ರಾಯಚೂರು ಜಿಲ್ಲೆಗೆ ಭೇಟಿ ಕೊಟ್ಟು ಅಲ್ಲಿ ಕೂಡ ಪರಿಹಾರವನ್ನು ನೀಡಬೇಕು ಎಂದು ತಮ್ಮ ಮೂಲಕ ಅವರನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ. ಆರ್, ಸಿಂಧ್ಯ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ನೀರಾವರಿ ಇಲಾಖೆಯ ಮಂತ್ರಿಗಳನ್ನೊ ತಕ್ಷಣ ಆ ವಿಭಾಗಕ್ಕೆ ಕಳುಹಿಸಿರತಕ್ಕಂಥದ್ದು ಒಳ್ಳೆಯ ಕೆಲಸ. ಮಾನ್ಯ ಮಂತ್ರಿಗಳು ಕೂಡ ಹೋಗಿ ನೋಡಿಕೊಂಡು ಬಂದಿದ್ದಾರೆ. ಈಗ ಅವರು ಹೇಳಿರತಕ್ಕಂಥ ಹೇಳಿಕೆ ಯಲ್ಲಿ ಇದು ಐದು ಕೋಟಿ ರೂಪಾಯಿಯಷ್ಟು ನಷ್ಟವಾಗಿದೆ ಎಂದು ಒಂದು ಅಂದಾಜಾಗಿದೆ, ಮತ್ತು ವಿವರವಾದ ಮಾಹಿತಿಯನ್ನು ನಾವು ತರುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಎಂಟು-ಹತ್ತು ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ನಷ್ಟವಾಗಿದೆ ಎಂದು ಜಿಲ್ಲೆಯ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳನ್ನು ನಾವು ಸಂಪರ್ಕ ಮಾಡಿದಾಗ ತಿಳಿಸಿದ್ದಾರೆ ನಾನು ಅವರ ಜೊತೆಯಲ್ಲಿ ಮಾತನಾಡಿದಾಗ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು ಹತ್ತು

ಕೋಟಿ ರೂಪಾಯಿಗೂ ಹೆಚ್ಚು ಲೂಕ್ಸಾನಾಗಿದೆ ಎಂದು ಅಂದಾಜನ್ನು ಕೊಡುತ್ತಾರೆ. ತಾವು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಅವರು ನಿಮ್ಮ ಜೊತೆಯಲ್ಲಿ ಬಂದಿದ್ದರೋ ಅವರು ನಿಮ್ಮನ್ನು ಸಂಪರ್ಕ ಮಾಡಿದರೋ ಇಲ್ಲವೊ ನನಗೆ ಗೊತ್ತಿಲ್ಲ. ಅದನ್ನು ತಾವು ತಿಳಿಸಬೇಕು.

ಈಗ ಬಹಳ ವಿಷಯವಾಗಿ ನನಗೆ ತೀವ್ರವಿರುವ ಹಾಗೆ ಅಲ್ಲಿ ಹಣ ಇನ್ನೂ ಬಿಡುಗಡೆ ಆಗಿಲ್ಲ. ಕೆಲಸಕಾರ್ಯಗಳು ಯಾವ ವೇಗದಲ್ಲಿ ತವರಿತಗತಿಯಲ್ಲಿ ನಡೆಯಬೇಕಾಗಿತ್ತೊ ಆಗ ವೇಗದಲ್ಲಿ ನಡೆಯುತ್ತಾ ಇಲ್ಲ ಎಂಬ ವಿಚಾರ ನಮಗೆ ಬಂದಿರುವ ಸುದ್ದಿ ಪ್ರಕಾರ ತಿಳಿದು ಬಂದಿದೆ. ಆದಕ್ಕಾಗಿ ನಾನಾದರೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದ ಪಕ್ಕದಲ್ಲಿರುವ ಆಧ್ರಪ್ರದೇಶದಲ್ಲಿ ಇದೇ ರೀತಿ ಹಾವಳಿ ಆದ ಸಂದರ್ಭದಲ್ಲಿ ಅವರು ತಕ್ಷಣ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳು ಹಾಗೂ ಉಪ ಪ್ರಧಾನಿಗಳನ್ನು ಕರೆಸಿದ್ದರು. ಅನಾಹುತ ಬಹಳ ಹೆಚ್ಚು ಪ್ರಮಾಣದಲ್ಲಿ ಆಗಿದ್ದರಿಂದ ಪ್ರಧಾನಿ ಹಾಗೂ ಉಪ ಪ್ರಧಾನಿಯವರು ಬಂದು ಹೋಗಿದ್ದರು. ಆದರೆ ಇಲ್ಲಿ ಅವರು ಬರತಕ್ಕ ಅವಶ್ಯಕತೆ ಇಲ್ಲದೇ ಇರಬಹುದು. ಆದರೆ ಕೇಂದ್ರ ಸರ್ಕಾರದ ನೆರವನ್ನು ನಿವು ಕೇಳುವುದು ಒಳ್ಳೆಯದು. ಹತ್ತು ಕೋಟಿ ರೂಪಾಯಿಗಳ ಲುಕ್ಸಾನು ಆಗಿದ್ದರೆ ಎಷ್ಟು ಬೇಕಾದರೂ ಅವರು ಕೊಡಬಹುದು. ಆದರೆ ಇನ್ನೂ ಸಹಿತ ನಮ್ಮ ರಾಜ್ಯ ಸರ್ಕಾರ ಏಕೆ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಮಾಡಿಲ್ಲ ಏಕೆ ಮಾಡಬಾರದು ಎಂದು ಈ ಸಂದರ್ಭದಲ್ಲಿ ಕೇಳಲಿಕ್ಕೆ ಬಯಸುತ್ತೇನೆ.

† ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ನನ್ನ ಹೇಳಿಕೆ ಮೇಲೆ ಕೆಲವೊಂದು ಸ್ಪಷ್ಟೀಕರಣಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಹಿಂದೆಂದೂ ಆಗದಷ್ಟು ಮಳೆ ಜಾಸ್ತಿ ಆಗಿದೆ. ಸುಮಾರು ಒಂದು ತಿಂಗಳಿಗಿಂತಲೂ ಹೆಚ್ಚು ಮಳೆ ಸತತವಾಗಿ ಬಿದ್ದ ಪರಿಣಾಮವಾಗಿ ಅಲ್ಲಿರತಕ್ಕಂಥ ರಸ್ತೆಗಳು, ಕಲ್ವರ್ಟ್‌ಗಳು ಅಪಾಯ ಸ್ಥಿತಿಗೆ ಬಂದು ಜನಜೀವನ ಅಸ್ತವ್ಯಸ್ತ ಆಗಿದೆ. ಬೇಸಾಯದ ಕಾರ್ಯ ಇನ್ನೂ ಪ್ರಾರಂಭ ಆಗಿಲ್ಲ. ಅಲ್ಲಿ ಮೊದಲೇ ರಸ್ತೆಗಳು, ಸುಸ್ಥಿತಿಯಲ್ಲಿರಲಿಲ್ಲ. ಅಲ್ಲಿನ ರಸ್ತೆ ಮಣ್ಣಿನ ರಸ್ತೆ ಆಗಿದ್ದು. ಆದರಲ್ಲೂ ಕಪ್ಪು ಮಣ್ಣಿನ ರಸ್ತೆಯಾದ್ದರಿಂದ ಮಳೆ ಬಿದ್ದ ನಂತರ ತಿರುಗಾಡಲಿಕ್ಕೆ ಸಾಧ್ಯ ಇಲ್ಲದೇ ಇರತಕ್ಕಂಥ ವಾತಾವರಣ ನಿರ್ಮಾಣ ಆಗಿದೆ. ಮಳೆಯಿಂದ ಆಗಿರತಕ್ಕ ಹಾನಿಯನ್ನು ನಾವು ಇನ್ನೂ ನಿಖರವಾಗಿ ಎಷ್ಟು ಎಂದು ಲೆಕ್ಕ ಮಾಡಲಿಕ್ಕೆ ಆಗಲಿಲ್ಲ. ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಅಧಿಕಾರಿಗಳಿಂದ ಮಾಹಿತಿಯನ್ನು ನಾವು ತರಿಸಿಕೊಳ್ಳುತ್ತೇವೆ. ಮಾನ್ಯ ಖರ್ಗೆಯವರು ರಸ್ತೆಗಳು ಹೋಗಿದ್ದಾವೆ ಕೆರೆಗಳು ಹೋಗಿದ್ದಾವೆ ಎಂದು ಹೇಳಿದರು. ಬಹುಶಃ ನಾನು ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ಇನ್ನೂ ಕೂಡ ಮಾಹಿತಿ ತರಿಸುವುದಕ್ಕೆ ನಾನು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಈ ಒಂದು ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಬೇಕಾದ ಅಗತ್ಯ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಷಯ ತಿಳಿದ ತಕ್ಷಣ ಅಲ್ಲಿನ ಪರಿಸ್ಥಿತಿಯನ್ನು ಅರಿತು. ಅಭ್ಯಸಿಸಿ ಸ್ಥಳದಲ್ಲಿಯೇ ತೀರ್ಮಾನ ತೆಗೆದು ಕೊಂಡು ಪರಿಹಾರವನ್ನು ಘೋಷಣೆ ಮಾಡತಕ್ಕ ಆದೇಶವನ್ನು ಕೊಟ್ಟು ನನ್ನನ್ನು ಕಳಿಸಿದ್ದರು. ಆ ಕೆಲಸವನ್ನು ನಾನು ನಿರ್ವಹಿಸಿದ್ದೇನೆ, ಆದರೆ ಮಾನ್ಯ ಖರ್ಗೆಯವರು, ಈಗ ಫೋನ್ ಮಾಡಿದ್ದೆ, ಇಂಜನಿಯರು ಹಣ ಬಂದಿಲ್ಲವೆಂದು ಹೇಳಿದರು ಎಂದು ಹೇಳಿದರು. ಒಂದು ಮಾತನ್ನು ಈ ಸಮಯದಲ್ಲಿ ಹೇಳದೆ ವಿಧಿಯಿಲ್ಲ. ಅಧಿಕಾರಿಗಳದ್ದು ಸ್ವಲ್ಪ ಅಲಕ್ಷ ಇದೆ. ಅವರ ಕರ್ತವ್ಯವನ್ನು ಮಾಡುವುದರಲ್ಲಿ ಅವರು ಸಮರ್ಪಣಾಭಾವದಿಂದ ಕೆಲಸ ಮಾಡುತ್ತಿಲ್ಲ. ಮಳೆ ಹೆಚ್ಚು ಬಿದ್ದು ಕೆರೆ ಒಡೆದು ಬಂದು ಊರಿನ ಮೇಲೆ ಹರಿದು ಹೋಗುತ್ತಿದ್ದರೂ ಕೂಡ ೨೦ ದಿನಗಳಾದರೂ ಒಬ್ಬ ಅಧಿಕಾರಿ ಆ ಸ್ಥಳಕ್ಕೆ ಹೋಗಿಲ್ಲ. ಹಳ್ಳಿಗಳಲ್ಲಿ ನೀರು ನುಗ್ಗಿದರ ಪರಿಣಾಮವಾಗಿ ಮೂರು ಗುಡಿಸಲುಗಳು ಬಿದ್ದು ಹೋಗಿವೆ. ೭ ರಾಸುಗಳು ಸತ್ತಿವೆ. ಯಾವ ಇಲಾಖಾ ಅಧಿಕಾರಿಗಳೆ ಆಗಲಿ, ರೆವಿನ್ಯೂ ಅಧಿಕಾರಿಗಳು ಇರಬಹುದು ಅಥವಾ ಪಿಡಬ್ಲ್ಯೂಡಿ ಅಧಿಕಾರಿಗಳು ಇರಬಹುದು, ಯಾವುದೇ ಇಲಾಖೆಯ ಅಧಿಕಾರಿಗಳು ಇರಬಹುದು. ಅವರು ಸ್ಥಳಕ್ಕೆ ಹೋಗಿಲ್ಲ. ಇದರ ಅರ್ಥ ಅಧಿಕಾರಿಗಳಲ್ಲಿ ಕೆಲಸ ಮಾಡತಕ್ಕ ಮನೋಭಾವ ಇಲ್ಲ ಬಹುಶಃ ನಮ್ಮ ಶಾಸಕ ಮಿತ್ರರು ಆ ಬಗ್ಗೆ ಹೆಚ್ಚು ಕ್ರಮ ತೆಗೆದು ಕೊಂಡು ಮೇಲಿಂದ ಮೇಲೆ ಅವರನ್ನು ಎಚ್ಚರಿಸುತ್ತಿದ್ದರ ಎಲ್ಲಾ ಸರಿ ಹೋಗುತ್ತದೆ ಎನ್ನುವುದು ನನ್ನ ವೈಯಕ್ತಿಕ ಭಾವನೆ. ಆ ದಿಶೆಯಲ್ಲಿ ಅವರು ಕೆಲಸ ಮಾಡುತ್ತಾರೆ ಎಂದು ನಾನು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ ನಾನು ಸ್ಥಳಕ್ಕೆ ಹೋದರೆ ಅಧಿಕಾರಿಗಳು ನನ್ನ ಜೊತೆಯಲ್ಲಿ ಬರುವುದಕ್ಕೆ ತಯಾರು ಇಲ್ಲ. ಜಿಲ್ಲಾ ಪರಿಷತ್‌ನವರಿಗೆ ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಬಂದರೆ ನಾವು ಯಾಕೆ ಹೋಗಬೇಕು ಎನ್ನತಕ್ಕ ಭಾವನೆ ಇತ್ತು ಎಂದು ಕಾಣುತ್ತದೆ. ಅಲಿಕ್ಷ್ಯ ಮನೋಭಾವವನ್ನು ತೋರಿದಂಥ ಇಬ್ಬರು ಹಿರಿಯ ಅಧಿಕಾರಿಗಳನ್ನು ಸ್ಥಳದಲ್ಲಿಯೇ ಸಸ್ಪೆಂಡ್ ಮಾಡಿದ್ದೇನೆ. ಅವತ್ತು ಸಂಜೆಯೇ

ಅಧಿಕಾರಿಗಳನ್ನೆಲ್ಲ ಕರೆದು ಅವರ ಕರ್ತವ್ಯವನ್ನು ಎಚ್ಚರಿಸಿದ್ದೇನೆ. ಜನ ಜೀವನ ಅಸ್ತವ್ಯಸ್ತವಾಗಿರತಕ ಈ ದಿಶೆಯಲ್ಲಿ ನೀವು ಎಚ್ಚರಿಕೆಯಿಂದ ಕೆಲಸ ಮಾಡಬೇಕು, ಸಮರ ಛಿದ್ದತೆಯಿಂದ ಕೆಲಸ ಮಾಡಬೇಕು ಎಂದಂ ಹೇಳಿದ್ದೇನೆ. ಇದಕ್ಕೆ ಆಗತಕ್ಕ ಎಲ್ಲಾ ಹಣವನ್ನು ಒದಗಿಸುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಕೂಡ ಹೇಳಿದ್ದೇನೆ. ಆದು ಆದನಂತರ ನಾನು ಇಲ್ಲಿಗೆ ಬಂದು ಆರ್ಥಿಕ ಮಂತ್ರಿಗಳ ಮತ್ತು ಕಂದಾಯ ಮಂತ್ರಿಗಳ ಜೊತೆ ಸಮಾಲೋಚಿಸಿ ಹಣವನ್ನು ಕೂಡ ಜಿಲ್ಲಾಧಿಕಾರಿಗಳ ವಶಕ್ಕೆ ಬಿಡುಗಡೆ ಮಾಡತಕ್ಕದ್ದರ ಬಗ್ಗೆ ಆಗತ್ಯಕ್ಕೆ ತಗುಮಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾನು ಆದೇಶ ಕೊಟ್ಟಿದ್ದೇನೆ: ಇದಕ್ಕೆ ಹಣದ ಕೊರತೆ ಇಲ್ಲ. ಆದಾಗ್ಯೂ ಇಂಜಿನಿಯರ್ ಅವರು ಶ್ರೀಮಾನ್ ಖರ್ಗೆಯವರಿಗೆ ಹಣ ಬಂದಿಲ್ಲ ನಾವೇನು ಮಾಡೋಣವೆಂದು ಹೇಳಿರುವುದು ಖಾತ್ರಿಯಾದರೆ ಈ ಘಳಿಗೆಯಲ್ಲೇ ಅವರನ್ನೂ ಕೂಡ ಸಸ್ಪೆಂಡ್ ಮಾಡತಕ್ಕದ್ದಕ್ಕೆ ನಾನು ಹಿಂಜರಿಯುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ· ಹಣ ಬಿಡುಗಡೆ ಮಾಡಿದ್ದೇವೆ. ಕೆಲಸ ಪ್ರಾರಂಭ ಮಾಡುವುದಕ್ಕೆ ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ.

೧೦–೩೦ ಪಿ.ಎಂ.

ನಿನ್ನೆ ಕೂಡ ನಾನು ರಿಮೈಂಡ್ ಮಾಡಿದ್ದೇನೆ. ಈ ಕೆಲಸ ತಿರುಭವಾಗಿದೆಯೇ ಯಾವ ಹಂತದಲ್ಲಿದೆ ಎಂದು ಕೇಳಿದ್ದೇನೆ. ಕೆಲಸ ಪ್ರಾರಂಭ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ತಿಳಿಸಿದ್ದಾರೆ ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡಿದ್ದೇನೆ. ಆದ್ದರಿಂದ ಬಹುಶಃ ಆ ದಿಶೆಯಲ್ಲಿ ನನ್ನ ಸಹೋದ್ಯೋಗಿ ಶಾಸಕರುಗಳು ಸಂಶಯ ಪಡತಕ್ಕಂಥ ಆಗತ್ಯವಿಲ್ಲ ಈಗ ನಾವು ಹೇಳಿರತಕ್ಕಂಥ ಮಾತನ್ನು ಕಾಯಾ ವಾಚಾ ಮನಸಾ ಮಾಡುತ್ತೇವೆ ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಸನ್ಮಾನ್ಯ ಸದಸ್ಯರು ರಾಯಚೂರು ಜಿಲ್ಲೆಗೆ ಏಕೆ ಭೇಟಿ ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದರು. ಇದರಲ್ಲಿ ತಾರತಮ್ಯವೇನಿಲ್ಲ. ನಮ್ಮ ಮುಖ್ಯ ಮಂತ್ರಿಗಳು ಅಂದೇ ಅದನ್ನು ಸ್ಪಷ್ಟಪಡಿಸಿದ್ದಾರೆ. ಬೇರೆ ಜಿಲ್ಲೆಗಳಿಂದಲೂ ಜಿಲ್ಲಾಧಿಕಾರಿಗಳಿಂದ ಮಾಹಿತಿ ತರಿಸಿ ನಷ್ಟವಾಗಿದ್ದರೆ ಅಲ್ಲೂ ಕೂಡ ಇದೇರೀತಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಅಲ್ಲಿಯ ಜಿಲ್ಲಾಧಿಕಾರಿಗಳಿಂದ ವರದಿ ಏನು ಬಂದಿದೆಯೋ ಗೊತ್ತಿಲ್ಲ. ಬಂದಿದ್ದರೆ ಅದರ ಮೇಲೆ ಮುಖ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಮಾತನ್ನು ತಿಳಿಸಬಯಸುತ್ತೇನೆ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ಅನಾಹುತಗಳಾಗಿರತಕ್ಕಂಥಾದ್ದು ನಿಜ ನಮಗೆ ನಿಖರವಾದಂಥ ಅಂಕಿ ಅಂಶಗಳು ಇನ್ನೂ ಸಿಕ್ಕಿಲ್ಲ. ಆದರೆ ನಾವು ಎಷ್ಟೇ ಹಣ ಕೊಟ್ಟರೂ ಕೂಡ ಕೆಲಸ ಮಾಡತಕ್ಕಂಥ ಅಧಿಕಾರಿಗಳ ಮನೋಭಾವನೆ ಕೂಡ ಬದಲಾವಣೆ ಮಾಡಬೇಕಾಗಿರತಕ್ಕಂಥಾದ್ದು ನಮ್ಮ ಜವಾಬ್ದಾರಿ ಇದೆಯೆಂದು ತಿಳಿದುಕೊಂಡಿದ್ದೇವೆ. ಈ ದಿಶೆಯಲ್ಲಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸೂಚನೆ ಕೂಡ ನಾವು ಕೊಟ್ಟಿದ್ದೇವೆ. ಈ ದಿಶೆಯಲ್ಲಿ ನಮ್ಮ ಶ್ರೀಸಾಮಾನ್ಯರಿಗೆ ಯಾವುದೇ ವಿಧವಾದ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎನ್ನತಕ್ಕಂಥ ಸ್ಪಷ್ಟ ಅಭಿಪ್ರಾಯವನ್ನು ತಮ್ಮ ಮುಂದೆ ಹೇಳ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇದರಲ್ಲಿ ೧೨–೧೫ ಕೋಟಿ ರೂಪಾಯಿಗಳಿಗೂ ಹೆಚ್ಚು ಲುಕ್ಸಾನು ಆಗಿರುವುದರಿಂದ, ಬೇರೆ ಕಡೆಗಳಲ್ಲೂ ಆಗಿರುವುದರಿಂದ ತಾವು ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಪರಿಹಾರ ಕೊಡಲಿಕ್ಕೆ ಒತ್ತಾಯ ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರಕ್ಕೆ ನಾವು ಏನಾದರೂ ಮೊದಲೇ ಹೋಗಬೇಕಾಗಿದ್ದರೆ ಸಹಾಯ ಕೇಳಬೇಕಾಗಿದ್ದರೆ ಅಂಕಿಸಂಖ್ಯೆಗಳ ಆಧಾರದ ಮೇಲೆ ಕೇಳಬೇಕಾಗುತ್ತದೆ. ಆದಕ್ಕಾಗಿ ಮಾನ್ಯ ಸಹೋದ್ಯೋಗಿ ಲೋಕೋಪಯೋಗಿ ಮಂತ್ರಿಗಳು ಹೋಗಿ ಬಂದಿದ್ದಾರೆ ಅವರು ಈ ಸದನಕ್ಕೂ ವರದಿ ಒಪ್ಪಿಸಿದ್ದಾರೆ ನನಗೂ ಕೂಡ ವರದಿ ಕೊಡುವವರಿದ್ದಾರೆ. ಇದೂ ಅಲ್ಲದೆ, ಅಲ್ಲಿ ಡಿಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್‌ರವರಿಂದ ನಾನು ವರದಿ ತರಿಸಿಕೊಂಡು ತಾವು ಹೇಳಿದ ಹಾಗೆ, ಕೇಂದ್ರ ಸರ್ಕಾರಕ್ಕೆ ಇದರಲ್ಲಿ ಸಹಾಯ ಮಾಡಬೇಕು ಎಂದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಕೆಲವು ಕೆಲಸಗಳು ಜಿಲ್ಲಾಪರಿಷತ್ತಿಗೆ ಬರುತ್ತವೆ. ಕೆಲವು ಕೆಲಸಗಳು ಪಿ.ಡಬ್ಲ್ಯೂ.ಡಿ.ಗೆ ಬರುತ್ತವೆ. ತಾವು ಹೇಳಿದಹಾಗೆ. ನಾನೇ ಹೋದರೆ ಜಿಲ್ಲಾ ಪರಿಷತ್ತಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಅಥವಾ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ನನಗೇ ಕೊಆಪರೇಟ್ ಮಾಡಿಲ್ಲ ಎನ್ನತಕ್ಕಂಥ ಭಾವನೆ ನಿಮಗೆ ಬಂದಮೇಲೆ ಇನ್ನು ನಮ್ಮ ಗತಿ ಏನಿರಬೇಕು. ಅದಕ್ಕೆ ನಾನು ದಯವಿಟ್ಟು ಕೇಳಿಕೊಳ್ಳು

ವುದೇನೆಂದರೆ, ಡೆಪ್ಯುಟಿ ಕಮಿಷನರಿಗೆ ತಾವು ಫುಲ್ ಪವರ್ಸ್ ಕೊಟ್ಟು. ಆ ಜಿಲ್ಲಾಪರಿಷತ್ತಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ ಅಥವಾ ಜೂನಿಯರ್ ಇಂಜಿನಿಯರಾಗಲಿ ಮತ್ತೆ ಪಿ.ಡಬ್ಲ್ಯು.ಡಿ.ಯವರಾಗಲಿ, ಮೈನರ್ ಇರಿಗೇಷನ್‌ನವರಾಗಲಿ — ಇವರು ಮೂವರೂ ಕೂಡ ಕಂಬೈಂಡ್ ಆಗಿ ಅವರ ಅಧ್ಯಕ್ಷತೆಯಲ್ಲಿ ಕೆಲಸ ಮಾಡತಕ್ಕಂಥ ಆದೇಶ ಕೊಡಬೇಕು. ಮತ್ತೆ ನೀವು ೨೮ ಕೆಳಗೊ ಅಥವಾ ಬೇರೆ ಯಾವುದೇ ಹೆಡ್‌ನಲ್ಲಿ ಹಣವನ್ನು ಏನು ಬಿಡುಗಡೆ ಮಾಡುತ್ತೀರಿ, ಅದನ್ನು ನೇರವಾಗಿ ಡೆಪ್ಯುಟಿ ಕಮಿಷನರಿಗೆ ಕೊಟ್ಟು, ಅವರಿಂದ ವೀಕ್ಲಿ ರಿಪೋರ್ಟ್ ತರಿಸಿಕೊಂಡು ಎಷ್ಟು ಹಣ ಖರ್ಚು ಮಾಡಿದ್ದಾರೆ, ಇಷ್ಟು ಇಲ್ಲ, ಎಷ್ಟು ಹಣ ಬೇಕು ಎನ್ನುವುದನ್ನು ಅವರಿಗೆ ಕೊಟ್ಟು ಕೆಲಸ ತೆಗೆದುಕೊಳ್ಳತಕ್ಕಂಥಾದ್ದು ಉತ್ತಮ. ಇಲ್ಲ ಅಂದರೆ ಜಿಲ್ಲಾಪರಿಷತ್‌ನ್ನು ನೋಡಿದರೆ ಪಿ.ಡಬ್ಲ್ಯು.ಡಿಗೆ ಆಗುವುದಿಲ್ಲ, ಪಿ.ಡಬ್ಲ್ಯು.ಡಿ.ನವರು ಹೇಳಿದರೆ ಜಿಲ್ಲಾಪರಿಷತ್‌ನವರು ಮಾಡುವುದಿಲ್ಲ, ಮೈನರ್ ಇರಿಗೇಷನ್‌ನವರು ಹೇಳಿದರೆ ಇನ್ನೊಬ್ಬರು ಕೇಳುವುದಿಲ್ಲ. ಆದುದರಿಂದ ದಯವಿಟ್ಟು ಈ ಕೊಆರ್ಡಿನೇಷನ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ.— ಆ ಒಂದು ಸಮಸ್ಯೆಯನ್ನು ಪರಿಹಾರ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಮುಖಂಡತ್ವದಲ್ಲಿ ಈ ಕೆಲಸವನ್ನು ಮಾಡತಕ್ಕಂಥಾದ್ದಕ್ಕೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಎಲ್ಲ ಕೆಲಸಗಳನ್ನೂ ಕೂಡ ಪಿ.ಡಬ್ಲ್ಯು.ಡಿ.ಯಲ್ಲಿ ಮಾಡಿ ಜಿಲ್ಲಾಧಿಕಾರಿಗಳ ಕೌಂಟರ್ ಸಿಗ್ನೇಚರ್ ಮೂಲಕ ಹಣವನ್ನು ವಿತರಣೆ ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ. ಆದರಂತೆ ನಾವು ಈಗಾಗಲೇ ಸಂಬಂಧಪಟ್ಟವರಿಗೆ ತಿಳಿಸಿದ್ದೇವೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ದೂರವಾಣಿ ಕದ್ದಾಲಿಕೆ ಕುರಿತು

SRI K. LAKKAPPA.— Madam Deputy Speaker, I had submitted one Privilege Motion notice against the member of this House and also the former Chief Minister regarding telephone bugging.

(ಗೊಂದಲ)

(ಹತ್ತಾರು ಜನ ಸದಸ್ಯರು ಒಟ್ಟಿಗೆ ಎದ್ದು ನಿಂತು ವಾತನಾಡಿದರು)

ಉಪಾಧ್ಯಕ್ಷರು.— ಮಾನ್ಯ ಲಕ್ಕಪ್ಪನವರೆ, ನಿನ್ನೆ ತಾವು ಇದ್ದಿರೋ ಇಲ್ಲವೋ ನೊಡ್ತಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರ ಬಗ್ಗೆ ಒಂದು ತೀರ್ಮಾನವಾಗಿದೆ. ಸೋಮವಾರ ದಿವಸ ಇದರ ಬಗ್ಗೆ ಚರ್ಚೆ ನಡೆಯುವುದಿದೆ.

(ಗೊಂದಲ)

ಉಪಾಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆ. ಶ್ರೀಯುತ ವಾಟಾಳ್ ನಾಗರಾಜ್ ರವರು ಮಂಬ್ಯಿಮಂತ್ರಿಗಳ ಗಮನ ಸೆಳೆಯುವುದು.

ವ್ಯವಸಾಯ ಸೇವಾ ಸಂಘಗಳು ಗೊಬ್ಬರ ವಿತರಣೆ ಮಾಡದಿರುವುದು

ಶ್ರೀ ಶಿವರಾಮೇಗೌಡ.— ಮಾನ್ಯ ಅಧ್ಯಕ್ಷರೇ. ಈ ರಾಜ್ಯದಲ್ಲಿ ರೈತರಿಗೆ ಗೊಬ್ಬರ ಸಕಾಲದಲ್ಲಿ ಸಿಗುತ್ತಿಲ್ಲ. ವ್ಯವಸಾಯ ಸೇವಾಸಂಘಗಳು ಗೊಬ್ಬರ ವಿತರಣೆ ಮಾಡುತ್ತಾ ಇಲ್ಲ ಎನ್ನುವುದರ ಬಗ್ಗೆ ಗಮನ ಸೆಳೆದಿದ್ದೇನೆ.

ಉಪಾಧ್ಯಕ್ಷರು.— ತಾವು ಬೇರೆ ನೋಟೀಸ್ ಕೊಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾನು ನೋಟೀಸ್ ಕೊಟ್ಟಿದ್ದೇನೆ. ಇದು ಮೂರು ಸಾರಿ ಚರ್ಚೆಗೆ ಬಂದಿದೆ. ಒಂದು ಸಾರಿ ಮಂತ್ರಿಗಳು ಇರಲಿಲ್ಲ. ಒಂದು ಸಾರಿ ನಾನು ಕೇಳಿದ ಪ್ರಶ್ನೆ ಬೇರೆ ಇತ್ತು. ಇವತ್ತು ರೈತರು ಗೊಬ್ಬರ ಸಿಗದೆ ಕಂಗಾಲಾಗಿಬ್ಬಾರೆ. ರಾಜ್ಯದ ಕೆಲವು ಭಾಗದಲ್ಲಿ ಮಳೆ ಬೀಳುತ್ತಿದೆ. ಇದು ಗಹನವಾದ ವಿಚಾರವಲ್ಲವೆ ?

ಉಪಾಧ್ಯಕ್ಷರು.— ಆದಷ್ಟು ಬೇಗ ತೆಗೆದುಕೊಳ್ಳೋಣ.